
# ಸಾಧನೆಗೆ ಸಲಹೆ



❋ ಜ್ಞಾನ, ಭಕ್ತಿ–ಎರಡೂ ಪಥಗಳೇ. ಭಕ್ತಿ ಮಾರ್ಗದಲ್ಲಿ ಸ್ವಲ್ಪ ಹೆಚ್ಚು ಬಾಹ್ಯಾಚಾರ ಬೇಕು. ಜ್ಞಾನಮಾರ್ಗಾವಲಂಬಿ ತಪ್ಪಿ ಅನಾಚಾರ ಮಾಡಿದರೆ, ಅದು ಜ್ಞಾನಾಗ್ನಿಯಲ್ಲಿ ಭಸ್ಮವಾಗಿಬಿಡುತ್ತದೆ. ಸುಮ್ಮನೆ ತಾನೇತಾನಾಗಿ ಉರಿಯುತ್ತಿರುವ ಬೆಂಕಿಯಲ್ಲಿ ಬಾಳೆ ಮರವನ್ನು ಬಿಸುಟರೂ ಅದು ಸುಟ್ಟು ಭಸ್ಮವಾಗುತ್ತದೆ.

❋ ಜ್ಞಾನಿಗಳ ಮಾರ್ಗ ವಿಚಾರಮಾರ್ಗ. ವಿಚಾರ ಮಾಡುತ್ತ ಮಾಡುತ್ತ ಒಮ್ಮೊಮ್ಮೆ ನಾಸ್ತಿಕಭಾವ ಬಂದುಬಿಡಬಹುದು. ಭಗವಂತನ ಸಾಕ್ಷಾತ್ಕಾರಕ್ಕಾಗಿ ನಿಜವಾಗಿ ವ್ಯಾಕುಲನಾಗಿರುವ ಭಕ್ತನ ಹೃದಯವನ್ನು ನಾಸ್ತಿಕ ಭಾವನೆಗಳು ಹೊಕ್ಕರೂ, ಆತ ಭಗವಚ್ಚಿಂತನೆ ಮಾಡುವುದನ್ನು ಬಿಡುವುದಿಲ್ಲ. ಯಾವ ರೈತನ ತಂದೆ, ತಾತ, ಮುತ್ತಾತ ವ್ಯವಸಾಯ ಮಾಡಿಕೊಂಡು ಬಂದಿದ್ದಾರೋ, ಆತ ಒಂದು ವರ್ಷ ಅನಾವೃಷ್ಟಿಯಾಗಿಬಿಟ್ಟಿತು ಎಂದು ವ್ಯವಸಾಯವನ್ನೇ ಬಿಟ್ಟು ಬಿಡುವುದಿಲ್ಲ.

❋ ಸ್ವಲ್ಪ ಸಾಧನೆ ಭಜನೆ ಮಾಡಬೇಕು. ಹಾಲಿನಲ್ಲಿ ಬೆಣ್ಣೆ ಇದೆ ಎಂದು ಸುಮ್ಮನೆ ಹೇಳಿಬಿಟ್ಟರೆ ಸಾಕಾಗದು. ಹಾಲಿಗೆ ಹೆಪ್ಪು ಹಾಕಿ ಕಡೆದು ಬೆಣ್ಣೆ ತೆಗೆಯಬೇಕು. ಆಗಾಗ ನಿರ್ಜನ ಪ್ರದೇಶಕ್ಕೆ ಹೋಗಿ ಧ್ಯಾನಮಾಡಿ ಬರಬೇಕು. ಕೆಲವು ಕಾಲ ನಿರ್ಜನ ಪ್ರದೇಶದಲ್ಲಿದ್ದು ಭಕ್ತಿಯನ್ನು ಸಂಪಾದಿಸಿಕೊಂಡ ನಂತರ ಇಚ್ಛೆ ಬಂದೆಡೆಯಲ್ಲಿ ಇರಬಹುದು. ಕಾಲಿಗೆ ಮೆಟ್ಟುಹಾಕಿಕೊಂಡು ಅನಾಯಾಸದಿಂದ ಮುಳ್ಳುಕಾಡಿನಲ್ಲಿ ನಡೆದು ಹೋಗಿಬಿಡಬಹುದು.

❋ ಮುಖ್ಯವಾಗಿ ಬೇಕಾದದ್ದು ಶ್ರದ್ಧೆ. ಗುರು ಅನೇಕರಿಗೆ ಬೇಕಾಗುತ್ತಾನೆ. ಆದರೆ ಆತನ ವಾಕ್ಯದಲ್ಲಿ ಶ್ರದ್ಧೆಯಿಡಬೇಕು. ಗುರುವನ್ನು ಸಾಕ್ಷಾತ್ ಭಗವಂತನೇ ಎಂಬ ದೃಷ್ಟಿಯಿಂದ ನೋಡಿದಾಗ ಮಾತ್ರವೇ ಆಧ್ಯಾತ್ಮಿಕ ಉನ್ನತಿ ಉಂಟಾಗುತ್ತದೆ. ಅದಕ್ಕಾಗಿಯೇ ವೈಷ್ಣವರು ಹೇಳುವುದು: 'ಗುರು, ಕೃಷ್ಣ, ವೈಷ್ಣವ ಒಂದೇ' ಎಂದು.

❋ ಭಗವಂತನ ನಾಮೋಚ್ಚಾರಣೆಯನ್ನು ಸರ್ವದಾ ಮಾಡುತ್ತಿರಬೇಕು. ಕಲಿಯುಗದಲ್ಲಿ ನಾಮಮಾಹಾತ್ಮ್ಯ. ಈ ಯುಗದಲ್ಲಿ ಅನ್ನಗತಪ್ರಾಣವಾದ್ದರಿಂದ ಯೋಗಾಭ್ಯಾಸ ಸಾಧ್ಯವಿಲ್ಲ. ಆತನ ನಾಮೋಚ್ಚಾರಣೆ ಮಾಡುತ್ತಾ ಕೈತಾಳ ಹಾಕಿದರೆ ಪಾಪವೆಂಬ ಹಕ್ಕಿಗಳು ಹಾರಿಹೋಗಿಬಿಡುತ್ತವೆ.

❋ ಯಾವಾಗಲೂ ಸತ್ಸಂಗ ಮಾಡುತ್ತಿರಬೇಕು. ಗಂಗೆಯನ್ನು ಸಮೀಪಿಸಿದಷ್ಟೂ ತಂಪಾದ ಹವ ಜಾಸ್ತಿಯಾಗುತ್ತಾ ಬರುತ್ತದೆ. ಬೆಂಕಿಯನ್ನು ಸಮೀಪಿಸಿದಂತೆಲ್ಲಾ ತಾಪವೂ ಅಧಿಕವಾಗುತ್ತಾ ಬರುತ್ತದೆ.

❋ ಭಗವಂತನ ಮೇಲೆ ಸಿಟ್ಟುಗೊಂಡು ಹೇಳು: 'ನೀನು ನನ್ನನ್ನು ಸೃಷ್ಟಿಸಿದ್ದೀಯೆ. ನಿನ್ನ ದರ್ಶನವನ್ನು ನನಗೆ ಕೊಟ್ಟೇ ಕೊಡಬೇಕು.' ಸಂಸಾರದಲ್ಲಾದರೂ ಇರು, ಅಥವಾ ಬೇರೆಲ್ಲಾದರೂ ಇರು; ಮನಸ್ಸು ಮಾತ್ರ ಸರ್ವದಾ ಭಗವಂತನಲ್ಲಿ ಇಟ್ಟಿರು. ವಿಷಯಾಸಕ್ತ ಮನಸ್ಸು ಒದ್ದೆಮುದ್ದೆಯಾದ ಬೆಂಕಿಕಡ್ಡಿ ಇದ್ದಹಾಗೆ. ಎಷ್ಟು ಉಜ್ಜಿದರೂ ಅದು ಹೊತ್ತಿಕೊಳ್ಳದು. ಏಕಲವ್ಯ ತನ್ನ ಗುರು ದ್ರೋಣಾಚಾರ್ಯರ ಮಣ್ಣಿನ ಪ್ರತಿಮೆಯನ್ನು ತನ್ನ ಮುಂದೆ ಇಟ್ಟುಕೊಂಡು ಧನುರ್ವಿದ್ಯೆಯನ್ನು ಕಲಿತುಕೊಂಡ.

❋ ವ್ಯಾಕುಲನಾಗಿ ಪ್ರಾರ್ಥನೆಮಾಡಬೇಕು. ತಾಯಿಗೆ ಮಕ್ಕಳ ಮೇಲಿರುವ ಆಕರ್ಷಣೆ, ಪತಿವ್ರತೆಗೆ ಪತಿಯ ಮೇಲಿರುವ ಆಕರ್ಷಣೆ, ಪ್ರಾಪಂಚಿಕನಿಗೆ ಪ್ರಪಂಚದ ಮೇಲಿರುವ ಆಕರ್ಷಣೆ ಇವು ಮೂರನ್ನೂ ಏಕೀಕರಿಸಿ ಭಗವಂತನ ಕಡೆಗೆ ತಿರುಗಿಸುವುದಾದರೆ, ಆಗ ದರ್ಶನ ದೊರೆತುಬಿಡುತ್ತದೆ.

❋ ಮನುಷ್ಯ ಯಾವ ಮಾರ್ಗ ಬೇಕಾದರೂ ಅನುಸರಿಸಲಿ, ಮನಸ್ಸು ಸ್ಥಿರವಾಗದ ಹೊರತು ಯೋಗ ಸಾಧ್ಯವಾಗುವುದಿಲ್ಲ. ಯೋಗಿಯ ಮನಸ್ಸು ಆತನ ವಶದಲ್ಲಿರುತ್ತದೆಯೇ ವಿನಾ ಆತ ಅದರ ವಶದಲ್ಲಿರುವುದಿಲ್ಲ. ಮನಸ್ಸು ಸ್ಥಿರವಾಯಿತು ಎಂದರೆ, ವಾಯು ಸ್ಥಿರವಾಗುತ್ತದೆ – ಕುಂಭಕವಾಗುತ್ತದೆ. ಇದೇ ಕುಂಭಕ ಭಕ್ತಿಯೋಗದಿಂದಲೂ ದೊರೆಯುತ್ತದೆ. ಭಕ್ತಿಯಿಂದಲೂ ವಾಯು ಸ್ಥಿರವಾಗಿಬಿಡುತ್ತದೆ.

❋ ಕಾಶಿಯಲ್ಲಿ ಬ್ರಾಹ್ಮಣನಾದರೂ ಸಾಯಲಿ, ವೇಶ್ಯೆಯಾದರೂ ಸಾಯಲಿ, ಬೇರೆ ಯಾರು ಬೇಕಾದರೂ ಸಾಯಲಿ, ಎಲ್ಲರೂ ಶಿವ ಆಗಿಬಿಡುತ್ತಾರೆ. ಯಾವಾಗ ಹರಿನಾಮ, ಕಾಳೀನಾಮ, ರಾಮನಾಮ ಇವುಗಳನ್ನು ಕೇಳಿದೊಡನೆಯೇ ಕಣ್ಣಿನಿಂದ ನೀರು ಸುರಿಯುವುದೋ, ಬಳಿಕ ಸಂಧ್ಯಾವಂದನೆ ಮೊದಲಾದ ಕ್ರಿಯೆಗಳ ಆವಶ್ಯಕತೆಯೇನಿರದು. ಎಲ್ಲಾ ಕರ್ಮಗಳೂ ಆತನನ್ನು ತಾವುತಾವಾಗಿಯೇ ಬಿಟ್ಟು ಹೋಗುತ್ತವೆ. ಕರ್ಮಫಲ ಆತನ ಹತ್ತಿರವೂ ಸುಳಿಯುವುದಿಲ್ಲ.

❋ ಸರಳತೆ ಇದ್ದರೆ, ಭಗವಂತನ ಸಾಕ್ಷಾತ್ಕಾರ ಬೇಗ ದೊರೆತುಬಿಡುತ್ತದೆ. ಎರಡು ಮಾರ್ಗಗಳಿವೆ; ಸನ್ಮಾರ್ಗ, ಅಸನ್ಮಾರ್ಗ. ಸನ್ಮಾರ್ಗದಲ್ಲಿ ಮುಂದುವರಿಯಬೇಕು.

**'ಶ್ರೀರಾಮಕೃಷ್ಣ ವಚನವೇದ'** ದಿಂದ